ರಾಜ್ಯದಲ್ಲಿ ಹುಡ್ಕೋ ನೆರವಿನಿಂದ ರಸ್ತೆಗಳ ನಿರ್ವಹಣೆ.

2214(2717) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯು ಹುಡ್ಕೋ ದಿಂದ 153 ಬ್ರಿಡ್ಜ್‌ಗಳನ್ನು ಅಂದಾಜು 100 ಕೋಟಿ ರೂ. ವೆಚ್ಚದಲ್ಲಿ ತೆಗೆದುಕೊಂಡಿದ್ದು ಈ ಯೋಜನೆಗಳಲ್ಲಿ ಸುಮಾರು 13 ಕೋಟಿಗೂ ಮೇಲ್ಪಟ್ಟು ಅವ್ಯವಹಾರ ಆಗಿರುವ ವಿಷಯ ಸರ್ಕಾರ ಮತ್ತು ಗುತ್ತಿಗೆದಾರರ ಮಧ್ಯೆ ಆಗಿರುವ ಒಪ್ಪಂದದಲ್ಲಿ ಕಂಡು ಬಂದಿದೆಯೇ;

ಆ) ಶ್ರೀರಂಗಪಟ್ಟಣದಿಂದ ಬೀದರ್ ರಸ್ತೆ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ಈ ರಸ್ತೆ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ ಖರ್ಚಾಗಬಹುದಾದ ಮೊತ್ತವೆಷ್ಟು ;

ಇ) ಈ ರಾಜ್ಯ ಹೆದ್ದಾರಿಯನ್ನು ಎರಡು ರೀತಿಯಲ್ಲಿ ಅಭಿವೃದ್ಧಿಪಡಿಸಲು ಉಸ್ತುವಾರಿ ಹಾಗೂ ದುರಸ್ತಿ ಎಂದು ಪರಿಗಣಿಸಲಾಗಿದೆಯೇ;

ಈ) ರಾಜ್ಯ ಹೆದ್ದಾರಿಗಳ ನಿರ್ವಹಣೆ ಮತ್ತು ದುರಸ್ತಿ ಮಾಡಲು ಹುಡ್ಕೋ ಹಣಕಾಸಿನ ಸಂಸ್ಥೆಯಿಂದ ಪಡೆದಿರುವ ಸಾಲದ ಮೊತ್ತವೆಷ್ಟು ಈ ಯೋಜನೆಯನ್ನು ಜಾರಿಗೊಳಿಸಲು ಗುತ್ತಿಗೆದಾರರಿಗೆ ಹಾಕಿದ ನಿಯಮಗಳೇನು; ಎಷ್ಟು ಜನ ಗುತ್ತಿಗೆದಾರರಿಗೆ ಈ ಕಾಮಗಾರಿಯನ್ನು ವಹಿಸಲಾಗಿದೆ (ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಹಾಗೂ ಜಿಲ್ಲಾವಾರು ರಾಜ್ಯ ಹೆದ್ದಾರಿಗಳನ್ನು ಯೋಜನೆಯಲ್ಲಿ ಸೇರಿಸಿದ ವಿವರಣೆ ನೀಡುವುದು)

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಇಲಾಖೆ ಸಚಿವರು) :—

ಅ) ಯಾವ ಅವ್ಯವಹಾರವೂ ಆಗಿರುವುದಿಲ್ಲ.

ಆ) ಶ್ರೀರಂಗಪಟ್ಟಣ-ಬೀದರ್ ರಸ್ತೆಯನ್ನು ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ. ಅಂದಾಜು ಪಟ್ಟಿ ತಯಾರಿಸಿದೆ. ಖರ್ಚಾಗಬಹುದಾದ ಮೊತ್ತ 494 ಕೋಟಿ ರೂ.ಗಳು

ಇ) ಬೀದರ್-ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯ 334 ಕಿ.ಮೀ. ಮೇಲ್ದರ್ಜೆಗೇರಿಸಲು ಹಾಗೂ 399 ಕಿ.ಮೀ. ಪುನಶ್ಚೇತನಗೊಳಿಸಲು ಪರಿಗಣಿಸಲಾಗಿದೆ.

ಈ) 7337ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳನ್ನು ಮೂರು ವರ್ಷಗಳ ಅವಧಿಯ ನಿರ್ವಹಣೆಗೆ ಹುಡ್ಕೋದಿಂದ ರೂ. 205 ಕೋಟಿ ಸಾಲ ಪಡೆಯಲು

ಉದ್ದೇಶಿಸಲಾಗಿದೆ. ಈ ಯೋಜನೆಯನ್ನು ಜಾರಿಗೊಳಿಸಲು ಗುತ್ತಿಗೆದಾರರಿಗೆ ಹಾಕಿದ ನಿಯಮಗಳು.

ಅ) ಆರ್ಥಿಕವಾಗಿ ಸಮರ್ಥರಿರಬೇಕು

ಆ) ಹಾಟ್‌ಮಿಕ್ಸ್ ಪ್ಲಾಂಟ್, ಪೇವರ್, ರೋಡ್ ರೋಲರ್, ಟಿಪ್ಪರ್ ಹೊಂದಿರಬೇಕು

ಇ) ಗುತ್ತಿಗೆ ಹಣದ ಶೇಕಡ 10ರಷ್ಟು ಹಣವನ್ನು ರಾಷ್ಟ್ರೀಕೃತ ಶೆಡ್ಯೂಲ್ ಬ್ಯಾಂಕ್‌ನಿಂದ ಲೈನ್ ಆಫ್ ಕ್ರೆಡಿಟ್ ಕೊಡಬೇಕು.

ಈ) ಮೊದಲನೇ ವರ್ಷದಲ್ಲಿ ನಿರ್ದಿಷ್ಟ ಪಡಿಸಿದ ನಿರ್ವಹಣೆ ಕಾಮಗಾರಿಯನ್ನು ಮಾಡಿ ಗುಂಡಿರಹಿತ ರಸ್ತೆಯನ್ನು ಕೊಡಬೇಕು. ಇದಕ್ಕೆ ತಗುಲುವ ವೆಚ್ಚದಲ್ಲಿ 85% ಮಾತ್ರ ಪಾವತಿಸಲಾಗುವುದು. ಉಳಿದ 5% ಮತ್ತು 10% ಅನ್ನು ಮುಂದಿನ 2ನೇ ಮತ್ತು 3ನೇ ವರ್ಷದಲ್ಲಿ ಪಾವತಿಸಲಾಗುವುದು.

ಉ) ಎರಡನೇ ವರ್ಷದಲ್ಲಿ ಗುಂಡಿ ರಹಿತ ರಸ್ತೆಯನ್ನಾಗಿ ಮಾಡಬೇಕು ಆದರೆ ಪಾವತಿಯನ್ನು ಮೊದಲನೇ ವರ್ಷದಲ್ಲಿ ಗುಂಡಿ ಮುಚ್ಚಲು ಮಾಡಿದ್ದ ಪರಿಮಾಣದ 40%ರಷ್ಟು ಮೊತ್ತಕ್ಕೆ ಸೀಮಿತಗೊಳಿಸಲಾಗುವುದು.

ಊ) 3ನೇ ವರ್ಷದಲ್ಲಿ ಗುಂಡಿ ಮುಚ್ಚುವ ಸಲುವಾಗಿ ಪಾವತಿಯನ್ನು ಮೊದಲನೇ ವರ್ಷದಲ್ಲಿ ಮಾಡಿದ ಗುಂಡಿ ಮುಚ್ಚುವ ಪರಿಮಾಣದ 20% ರಷ್ಟು ಮೊತ್ತಕ್ಕೆ ಸೀಮಿತಗೊಳಿಸಲಾಗುವುದು. ಗುಂಡಿಗಳೇನಾದರೂ ಬಂದಲ್ಲಿ ಅದನ್ನು ಏಳು ದಿವಸದಲ್ಲಿ ಮುಚ್ಚದಿದ್ದರೆ ಸದರಿ ಕೆಲಸವನ್ನು ಇಲಾಖೆಯಿಂದ ಕೈಗೊಂಡು ಅದರ 2ರಷ್ಟು ವೆಚ್ಚವನ್ನು ಗುತ್ತಿಗೆದಾರರಿಂದ ವಸೂಲಿ ಮಾಡಲಾಗುವುದು. ರಾಜ್ಯ ಹೆದ್ದಾರಿಯ ನಿರ್ವಹಣೆಯ ಕಾರ್ಯವನ್ನು 27 ಲೋಕೋಪಯೋಗಿ ವಿಭಾಗಗಳಲ್ಲಿ ವಿಂಗಡಿಸಲಾಗಿದ್ದು 25 ಗುತ್ತಿಗೆದಾರರಿಗೆ ವಹಿಸಲಾಗಿದೆ.

ಗುತ್ತಿಗೆದಾರರ ಹೆಸರು, ಹಾಗೂ ಜಿಲ್ಲಾವಾರು ರಾಜ್ಯ ಹೆದ್ದಾರಿಗಳ ವಿವರಗಳನ್ನು ಲಗತ್ತಿಸಿದೆ.

ರಾಜ್ಯ ಹೆದ್ದಾರಿಗಳ

| ಕ್ರ.ಸ. | ವಿಭಾಗ | ಗುತ್ತಿಗೆ ಮೌಲ್ಯ | ಗುತ್ತಿಗೆದಾರರ ಹೆಸರು |
|---|---|---|---|
| ೧ | ೨ | ೩ | ೪ |
| ೧. | ಬೆಂಗಳೂರು | ೧೨೬೨.೦೦ | ಶ್ರೀ ದುರ್ಗ ಕಂಸ್ಟ್ರಕ್ಷನ್ ಇಂಜಿನಿಯರಿಂಗ್ ರಸ್ತೆ ಬಿಲ್ಡರ್ಸ್ ಬ್ರಾಂಚ್ ನಂ.೩೩೧, ವಿಜಯನಗರ ರೈಲ್ವೆ ಲೇಔಟ್, ಹೆಬ್ಬಾಳ್, ಮೈಸೂರು-೧೭ |
| ೨. | ತುಮಕೂರು | ೧೧೯೨.೭೮ | ಮೆ. ನ್ಯಾಷನಲ್ ಅಸಫಾಲ್ಟ್ ಪ್ರಾಡಕ್ಟ್ಸ್ ಅಂಡ್ ಕಂಸ್ಟ್ರಕ್ಷನ್ ಕಂಪನಿ ಇಂಜಿನೀಯರ್ಸ್ ಅಂಡ್ ಕಂಸ್ಟ್ರಕ್ಟರ್ಸ್ ೧೧೨, ಫಸ್ಟ್ ಫ್ಲೋರ್, ಕಾಮರ್ಸ್ ಹೌಸ್, ೯/೧, ಕನ್ನಿಂಗ್‌ಹ್ಯಾಮ್ ರೋಡ್, ಬೆಂಗಳೂರು - ೫೬೦ ೦೫೨ |
| ೩. | ಕೋಲಾರ | ೧೩೩೨.೭೯ | ಮೆ. ಟಾರ್‌ಮ್ಯಾಟ್ ಇನ್‌ಫ್ರಾಸ್ಟ್ರಕ್ಚರಲ್ ಇಂ.ಜಿ. ಪ್ರೈವೇಟ್ ಲಿ, ಜನರಲ್ ವೈದ್ಯ ಮಾರ್ಗ, ವಾಗೇಶ್ವರಿ ಮಂದಿರ ಹತ್ತಿರ ಗೋರೆಗೋನ್ (ಈಸ್ಟ್), ಪಿ.ಬಿ. ನಂ.೯೦೪೨, ಮುಂಬಾಯಿ - ೪೦೦೦೬೩ |
| ೪. | ಶಿವಮೊಗ್ಗ | ೧೨೬೩.೦೦ | ಶ್ರೀ ಪ್ರತಿಭಾ ಕಂಸ್ಟ್ರಕ್ಷನ್ ಇಂಜಿನೀಯರ್ಸ್ ಅಂಡ್ ಕಂಟ್ರಾಕ್ಟರ್ಸ್ ಬ್ಲಾಕ್ ನಂ.೨, ಶಿಲ್ಪ ಅಪಾರ್ಟ್‌ಮೆಂಟ್ ಶಾರಾಬಾಯಿ ಪಾರ್ಕ್ ಕೊಲ್ಲಾಪುರ್-೪೧೬೧೦೩ |
| ೫. | ದಾವಣಗೆರೆ | ೬೬೬.೫೮ | ಶ್ರೀ ಎ. ಕೊಂಡಯ್ಯ, ಪಿ.ಡಬ್ಲ್ಯೂಡಿ ಕಂಟ್ರಾಕ್ಟರ್, ಕ್ಲಾಸ್ - ೧, ತಿರುಮಲ, ಡೋರ್ ನಂ.೧೮೫೫/೧೦, ೩ನೇ ಮೈನ್, ಸ್ವಾಮಿ ವಿವೇಕಾನಂದ ಲೇಔಟ್, ದಾವಣಗೆರೆ - ೫೭೭೦೦೪ |
| ೬. | ಚಿತ್ರದುರ್ಗ | ೧೨೮೦.೯೯ | ಶ್ರೀ ಎ. ಬಲರಾಮರೆಡ್ಡಿ, ಕ್ಲಾಸ್ - ೧ ಕಂಟ್ರಾಕ್ಟರ್, ಹೌಸ್ ನಂ.೯೫, ವಿದ್ಯಾನಗರ, ಚಿತ್ರದುರ್ಗ ೫೭೭೫೦೧ |
| ೭. | ಕೋಲಾರ | ೧೮೪೮.೮೯ | ಶ್ರೀ ವಿಶಾಲ್ ಇನ್‌ಫ್ರಾಸ್ಟ್ರಕ್ಚರ್ ಲಿ. ನಂ.೫೦೪, ನ್ಯೂ ಡಯಾಗನಲ್ ರೋಡ್ ೩ನೇ ಬ್ಲಾಕ್, ಜಯನಗರ, ಬೆಂಗಳೂರು-೧೧ |

ವಿವರಣೆಯ ಪಟ್ಟಿ

| ಕೆ.ಆರ್.ಡಿ.ಸಿ.ಎಲ್ ಅನುಮತಿ | ಗುತ್ತಿಗೆಯ ಕರಾರು ದಿನಾಂಕ | ಕಾರ್ಯಾದೇಶ ದಿನಾಂಕ | ಪ್ರಾರಂಭದ ದಿನಾಂಕ | ರಸ್ತೆಯ ಉದ್ದ |
|---|---|---|---|---|
| ೫ | ೬ | ೭ | ೮ | ೯ |
| ೧೧-೫-೦೧ | ೧-೬-೦೧ | ೧-೬-೦೧ | ೨-೬-೦೧ | ೪೫೮ |
| ೩-೩-೦೧ | ೧೪-೩-೦೧ | ೧೪-೩-೦೧ | ೧೧-೪-೦೧ | ೩೮೧ |
| --- | ೨೦-೪-೦೧ | ೨೦-೪-೦೧ | ೨೦-೪-೦೧ | ೪೩೪ |
| ೧೧-೫-೦೧ | ೧೬-೫-೦೧ | ೧-೬-೦೧ | ೧-೬-೦೧ | ೩೮೧ |
| ೩-೩-೦೧ | ೭-೩-೦೧ | ೧೯-೩-೦೧ | ೧೪-೪-೦೧ | ೧೭೩ |
| ೩-೩-೦೧ | ೭-೩-೦೧ | ೧೭-೩-೦೧ | ೧೭-೩-೦೧ | ೩೩೬ |
| ೩೦-೩-೦೧ | ೭-೪-೦೧ | ೧೨-೪-೦೧ | --- | ೩೮೫ |

| ೧ | ೨ | ೩ | ೪ |
|---|---|---|---|
| ೮. | ಚಿಕ್ಕ ಮಂಗಳೂರು | ೧೦೬೮.೫೭ | ಮೆ. ಸಾಂಚ್ ಕಂಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್. ನಂ.೫೦೫, ಫಸ್ಟ್ ಫ್ಲೋರ್, ೩ನೇ ಬ್ಲಾಕ್ ಜಯನಗರ, ಬೆಂಗಳೂರು-೧೧ |
| ೯. | ಮಂಗಳೂರು | ೭೮೯.೦೦ | ಶ್ರೀ ಶೇಖರ್ ಶೆಟ್ಟಿ, ಪಿ.ಡಬ್ಲ್ಯೂಡಿ ಕಂಟ್ರಾಕ್ಟರ್, ಶ್ರೀ ದೇವಿ ಪ್ರಸಾದ್, ಕಿನ್ನಿಗೋಳಿ - ೫೭೪೧೫೦ |
| ೧೦. | ಉಡುಪಿ | ೮೯೨.೨೯ | ಶ್ರೀ ಪಿ.ಬಿ. ಇಬ್ರಾಹಿಂ, ಪಿ.ಡಬ್ಲ್ಯೂಡಿ ಕಂಟ್ರಾಕ್ಟರ್, ಕ್ಲಾಸ್ - ೧, ಬಂದರ್ ರೋಡ್, ಬಟ್ಕಳ್ - ೫೭೧೨೩೭ (ಯುಕೆ) |
| ೧೧. | ಕೊಡಗು | ೩೯೬.೦೦ | ಆರ್. ಚಿನ್ನಸ್ವಾಮಿ, ಪಿ.ಡಬ್ಲ್ಯೂಡಿ ಕಂಟ್ರಾಕ್ಟರ್, ಕ್ಲಾಸ್ - ೧, ಮಹದೇಶ್ವರ ಬ್ಲಾಕ್, ಸೋಮವಾರ್‌ಪೇಟ್ - ೫೭೧೨೩೭, ಕೊಡಗು |
| ೧೨. | ಮೈಸೂರು | ೬೧೮.೪೨ | ಶ್ರೀ ಗೋವಿಂದೇಗೌಡ, ಹೌಸ್ ನಂ.೫೫, ೮ನೇ ಮೈನ್ ೩ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು |
| ೧೩. | ಮಂಡ್ಯ | ೩೬೪.೦೬ | ಶ್ರೀ ಎನ್. ಶ್ರೀನಾಥರೆಡ್ಡಿ, ಕೀಲಾವತಿ ಹಳ್ಳಿ, ಪೆದ್ದಪಲ್ಲಿ ಮಂಡಲ್, ಚಿತ್ತೂರು ತಾಲ್ಲೂಕು, ಆಂಧ್ರಪ್ರದೇಶ್ |
| ೧೪. | ಚಾಮರಾಜ-ನಗರ | ೧೬೫.೦೦ | ಶ್ರೀ ಚಂದ್ರಶೇಖರಯ್ಯ, ಕ್ಲಾಸ್ - ೧ ಕಂಟ್ರಾಕ್ಟರ್, ನಂ.೫೦, ಕಾಮಾಕ್ಷಿ ಆಸ್ಪತ್ರೆ ಈಸ್ಟ್ ಕುವೆಂಪು ನಗರ, ಮೈಸೂರು - ೫೭೦ ೦೨೧ |
| ೧೫. | ಬೀದರ್ | ೬೪೩.೧೨ | ಆರ್.ಕೆ. ಇಂಜಿನೀ., ಸಿವಿಲ್ ಕಾಂಟ್ರಾಕ್ಟರ್ಸ್, ೬-೩-೨೫೨/ಎ/೧೫, ಫ್ಲಾಟ್ ನಂ.೨, ಸಂದೇಶ್ ಅಪಾರ್ಟ್‌ಮೆಂಟ್ಸ್, ಎರ್ರಾಮಂಜಿಲ್ ಕಾಲೋನಿ, ಹೈದ್ರಾಬಾದ್ - ೫೦೦ ೪೮೨ |
| ೧೬. | ಗುಲ್ಬರ್ಗ | ೧೪೦೩.೦೦ | ಮೆ. ಸ್ವೆಲ್ಲಾರ್ ಪ್ರಾಜೆಕ್ಟ್ಸ್ (ಪಿ) ಲಿ. ಬಿಲ್ಡರ್ಸ್ ಮತ್ತು ಡೆವಲೊಪ್ಪರ್ಸ್, ೧೧-೪-೬೩೬/ಸಿ, ಎ.ಸಿ. ಗಾರ್ಡನ್, ಹೈದರಬಾದ್ - ೫೪೦ ೦೦೪ (ಎ.ಪಿ.) |
| ೧೭. | ಯಾದಗಿರ್ | ೮೫೭.೯೨ | ಮೆ. ಸೂರ್ಯ ಕಂಸ್ಟ್ರಕ್ಷನ್ ನಂ.೬೦೧, ಪಿನಾಕಲ್ಲ್ ಪ್ಲೆಡ್ ಉಮಾನಗರ ಮುಖ್ಯರಸ್ತೆ, ಕಂಟರಿ ಕ್ಲಬ್ ಹತ್ತಿರ, ಬೇಗಮ್ ಪೇಟ್, ಹೈದರಾಬಾದ್ ೫೬೦ ೦೧೬ |

| ೫ | ೬ | ೭ | ೮ | ೯ |
|---|---|---|---|---|
| ೨೭-೩-೦೧ | ೩೧-೩-೦೧ | ೩೧-೩-೦೧ | ೭-೫-೦೧ | ೨೪೨ |
| ೧೧-೫-೦೧ | ೧೬-೫-೦೧ | ೧೬-೫-೦೧ | ೨-೬-೦೧ | ೩೩೮ |
| ೩೦-೩-೦೧ | ೧೮-೪-೦೧ | ೧೧-೫-೦೧ | ೧೯-೫-೦೧ | ೨೮೩ |
| ೧೧-೫-೦೧ | ೧೬-೫-೦೧ | ೧೬-೫-೦೧ | ೨೧-೫-೦೧ | ೩೧೧ |
| ೧೧-೫-೦೧ | ೧೬-೫-೦೧ | ೨೪-೫-೦೧ | ೧-೬-೦೧ | ೧೯೫ |
| ೩೦-೩-೦೧ | ೧೮-೪-೦೧ | ೧೮-೪-೦೧ | ೨೫-೪-೦೧ | ೧೧೫ |
| ೧೧-೫-೦೧ | ೧೬-೫-೦೧ | ೨೬-೫-೦೧ | ೧-೬-೦೧ | ೯೪ |
| ೩೦-೩-೦೧ | ೧೯-೪-೦೧ | ೨೫-೪-೦೧ | ೭-೫-೦೧ | ೨೧೬ |
| ೦೩-೦೩-೦೧ | ೧೨-೦೩-೦೧ | ೧೨-೦೩-೦೧ | ೧೨-೦೩-೦೧ | ೩೬೬ |
| ೦೩-೦೩-೦೧ | ೦೭-೦೩-೦೧ | ೦೬-೦೩-೦೧ | ೦೨-೦೪-೦೧ | ೨೦೬ |

| ೧ ೨ | ೩ | ೪ |
|---|---|---|
| ೧೮. ಬೆಳಗಾವಿ | ೧೪೬೮.೬೮ | ಶ್ರೀ ಹೆಚ್.ಪಿ. ಮದುಕರ್, ೪೧, 'ಪ್ರಶಾಂತ್' ವಿಜಯನಗರ ಎಕ್ಸಟೆಂಶನ್, ಹುಬ್ಬಳ್ಳಿ - ೫೮೦ ೦೩೨ |
| ೧೯. ಬಿಜಾಪುರ | ೬೩೧.೦೦ | ಶ್ರೀ ಎಸ್.ಬಿ. ಪಾಟೀಲ್ (ಕಡಲೆವಾಡ), ಜಯನಗರ ಕಾಲೋನಿ, ಗಂಗ್ ಬಾವಾಡ್ ರೋಡ್ ಬಿಜಾಪುರ |
| ೨೦. ಬಾಗಲ್‌ಕೋಟೆ | ೫೩.೨.೦೨ | ಶ್ರೀ ಸುಧಾಕರ್, ನಂ. ೧೭೭೮/೩, ವಿನಾಯಕ ಎಕ್ಸ್‌ಟೆಂಷನ್, ೨ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ - ೫೭೭ ೦೦೫ |
| ೨೧. ಧಾರವಾಡ | ೨೪೩.೦೦ | ಮೆ. ಎಸ್.ಎಸ್. ನಾಯಕ್ ಅಂಡ್ ಸನ್ಸ್, ಪ್ಲಾಟ್ ನಂ.೮, ಶ್ರೀ ಸಾಯಿ, ವಿದ್ಯಾನಗರ, ಹುಬ್ಬಳ್ಳಿ - ೫೮೦೦೨೧ |
| ೨೨. ಹಾವೇರಿ | ೩೮೮.೭೩ | ಮೆ.ಮೆದು ಕಂಸ್ಟ್ರಕ್ಷನ್ಸ್, ೩೧, ಜಿನ್ ದರ್ಶನ್, ನಂ.೩೩, ರೈಲ್ವೆ ಪ್ಯಾರಲೆಲ್ಸ್ ರೋಡ್, ನೆಹರು ನಗರ, ಬೆಂಗಳೂರು - ೫೬೦ ೦೨೦. |
| ೨೩. ಗದಗ್ | ೪೦೪.೦೦ | ಶ್ರೀ ಎಸ್.ಡಿ. ರೆಡ್ಡಿ, ಕ್ಲಾಸ್ ೧, ಪಿ.ಡಬ್ಲ್ಯೂಡಿ ಕಂಟ್ರಾಕ್ಟರ್, "ಬಸವ ಕಿರಣ", ಶಿರಡಿ ಸಾಯಿಬಾಬ ಕಾಲೋನಿ, ಸಾದನಕೇರಿ, ಧಾರವಾಡ - ೫೮೦ ೦೦೪ |
| ೨೪. ರಾಯಚೂರು | ೪೬೪.೪೮ | ಮೆ. ಸೂರ್ಯ ಕಂಸ್ಟ್ರಕ್ಷನ್, ಫ್ಲಾಟ್ ನಂ. ೬೦೧ ಪಿನಕ್ಲೆ ಪೈಡ್, ಉಮನಗರ ಮುಖ್ಯರಸ್ತೆ, ಕಂಟ್ರಿ ಕ್ಲಬ್ ಹತ್ತಿರ, ಬೇಗಮ್ ಪೇಟ್, ಹೈದರಾಬಾದ್ ೫೬೦ ೦೧೬ |
| ೨೫. ಕೊಪ್ಪಳ | ೩೫೫.೮೮ | ಶ್ರೀ ಎಸ್.ಆರ್. ನವಲಿ ಹಿರೇಮಠ್, ಪಿ.ಡಬ್ಲ್ಯೂಡಿ ಕ್ಲಾಸ್ ೧, ಕಂಟ್ರಾಕ್ಟರ್, ಬಿ.ಬಿ. ಪಾಟೀಲ್ ನಗರ ಕೊಪ್ಪಳ ೫೬೦ ೦೧೬. |
| ೨೬. ಬಳ್ಳಾರಿ | ೫೧೫.೪೯ | ಶ್ರೀ ಎ. ಪ್ರಭಾಕರ ರೆಡ್ಡಿ, ಕ್ಲಾಸ್ ೧, ಕಂಟ್ರಾಕ್ಟರ್, ನಂ.೪೩, ಕೆ.ಹೆಚ್.ಬಿ. ಕಾಲೋನಿ, ಗಾಂಧಿನಗರ, ಬಳ್ಳಾರಿ ೫೮೩ ೧೦೩ |
| ೨೭. ಕಾರವಾರ | | **ಗುತ್ತಿಗೆದಾರರನ್ನು ನೇಮಕ ಮಾಡಿರುವುದಿಲ್ಲ** |

ಸೂಚನೆ: ಮೇಲಿನ ವರದಿಯನ್ನು ಸಂಬಂಧಪಟ್ಟ ಪಿ.ಡಬ್ಲ್ಯೂ.ಡಿ ಕಾರ್ಯನಿರ್ವಾಹಕ

| ೫ | ೬ | ೭ | ೮ | ೯ |
|---|---|---|---|---|
| ೧೧-೫-೦೧ | ೧೪-೫-೦೧ | ೧೭-೫-೦೧ | ೨೪-೫-೦೧ | ೪೬೬ |
| ೦೩-೦೩-೦೧ | ೦೭-೦೩-೦೧ | ೦೭-೦೩-೦೧ | ೧೮-೦೪-೦೧ | ೨೨೬ |
| ೦೩-೦೩-೦೧ | ೦೭-೦೩-೦೧ | ೦೭-೦೩-೦೧ | ೦೧-೦೫-೦೧ | ೧೮೧ |
| ೧೧-೦೫-೦೧ | ೧೬-೦೫-೦೧ | ೬-೦೫-೦೧ | ೨೫-೦೫-೦೧ | ೧೧೧ |
| ೦೩-೦೩-೦೧ | ಗುತ್ತಿಗೆದಾರನ ಅರ್ಜಿಯನ್ನು ಮಾನ್ಯ ಉಚ್ಚನ್ಯಾಯಾಲಯ ತಡೆ ಹಿಡಿದಿದೆ. ಮಾನ್ಯ ಉಚ್ಚನ್ಯಾಯಾಲಯದಆದೇಶದ ಪ್ರಕಾರ ಪರಿಪಾಲಿಸಲಾಗಿದೆ | | | ೨೦೦ |
| ೦೩-೦೩-೦೧ | ೦೯-೦೩-೦೧ | ೦೯-೦೩-೦೧ | ೧೪-೦೫-೦೧ | ೧೭೭ |
| ೦೩-೦೩-೦೧ | ೦೭-೦೩-೦೧ | ೦೭-೦೩-೦೧ | ೨-೦೩-೦೧ | ೧೭೭ |
| ೦೩-೦೩-೦೧ | ೨೬-೦೩-೦೧ | ೨೭-೦೩-೦೧ | ೦೬-೦೪-೦೧ | ೨೦೮ |
| ೨೮-೦೨-೦೧ | ೦೮-೦೩-೦೧ | ೨೧-೦೩-೦೧ | ೨೬-೦೪-೦೧ | ೨೩೯ |
| | | | | ೪೪೫ |

ಇಂಜಿನೀಯರ್‌ಗಳು ಕಳುಹಿಸಿದ ವಾಸ್ತವಿಕ ಪ್ರಗತಿಯ ಪ್ರಕಾರ ತಯಾರಿಸಲಾಗಿದೆ.